# ಗ್ಲಾಮರ್ ಜಗತ್ತಿನ ವಿಶಿಷ್ಟ ಶ್ರುತಿ

**ಸೌಂದರ್ಯದ ಮೂಲಕ ಕಂಗೊಳಿಸುವ ನಟಿಯರ ನಡುವೆ ತನ್ನ ಪ್ರತಿಭೆಯಿಂದಲೇ ಗುರ್ತಿಸಿಕೊಂಡಿರುವ ಶ್ರುತಿ ಹರಿಹರನ್, ಸಂವೇದನಾಶೀಲ ಕಲಾವಿದೆಯಾಗಿ ರೂಪುಗೊಳ್ಳುತ್ತಿದ್ದಾರೆ.**



'ಈ ಚಿತ್ರದಲ್ಲಿ ನನ್ನದು ಬಬ್ಲಿ ಬಬ್ಲಿ ಕ್ಯಾರೆಕ್ಟರ್'. ಇಂಥ ಹೇಳಿಕೆಯಿಲ್ಲದೆ ಗಾಂಧಿನಗರದಲ್ಲಿ ಬಹುತೇಕ ನಾಯಕಿಯರ ಮಾತುಗಳು ಪೂರ್ಣಗೊಳ್ಳುವುದಿಲ್ಲ. ಇಂಥ ಬಬ್ಲಿ ಬಬ್ಲಿ ಹುಡುಗಿಯರ ನಡುವೆ ಗಂಭೀರವಾಗಿ, ಅರ್ಥಪೂರ್ಣವಾಗಿ ಮಾತನಾಡುವ ಕಲಾವಿದೆಯರು ಕಡಿಮೆ. ಅಂಥ ವಿರಳರಲ್ಲಿ ಒಬ್ಬರು ಶ್ರುತಿ ಹರಿಹರನ್.

ಗ್ಲಾಮರ್ ಪ್ರಪಂಚದಲ್ಲಿ ಶ್ರುತಿ ತಮ್ಮ ಸರಳತೆಯಿಂದ ಹಾಗೂ ಸಿನಿಮಾ ಕುರಿತ ಬದ್ಧತೆಯಿಂದ ಗಮನಸೆಳೆದವರು. ಅಹುದಹುದು ಎನ್ನುವಂತೆ ಆತ್ಮವಿಶ್ವಾಸದಿಂದ ಮಾತನಾಡುವ ಅವರು, ಪಾತ್ರಗಳ ಆಯ್ಕೆಯಲ್ಲೂ ಅಷ್ಟೇ ಎಚ್ಚರ ವಹಿಸಿರುವುದು ಅವರು ಈವರೆಗೆ ನಟಿಸಿರುವ ಸಿನಿಮಾಗಳ ಪಟ್ಟಿ ನೋಡಿದರೆ ತಿಳಿಯುತ್ತದೆ. ಮೂರು ವರ್ಷಗಳ ಹಿಂದೆ ತೆರೆಕಂಡ 'ಲೂಸಿಯಾ' ಚಿತ್ರದ ಮೂಲಕ ಗಾಂಧಿನಗರಕ್ಕೆ ಬಂದ ಅವರು, ಆನಂತರ ನಟಿಸಿದ್ದರಲ್ಲಿ ಪ್ರಯೋಗಶೀಲ ಚಿತ್ರಗಳೇ ಹೆಚ್ಚು. 'ಸವಾರಿ 2', 'ದ್ಯಾವ್ರೆ', 'ಪ್ಲಸ್' ಚಿತ್ರಗಳಲ್ಲಿನ ಅವರ ಪಾತ್ರ ನಿರ್ವಹಣೆ ಸಹೃದಯರ ಗಮನಸೆಳೆದಿತ್ತು.

2016ರಲ್ಲಿ ಶ್ರುತಿ ಅಭಿನಯದ ನಾಲ್ಕು ಚಿತ್ರಗಳು ತೆರೆಕಂಡಿವೆ. 'ಜೈ ಮಾರುತಿ 800', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು', 'ಸಿಪಾಯಿ' ಹಾಗೂ 'ಮಾದ ಮತ್ತು ಮಾನಸಿ'. ಇವುಗಳಲ್ಲಿ 'ಗೋಧಿ ಬಣ್ಣ' ಸಿನಿಮಾ ವರ್ಷದ ಬಹು ದೊಡ್ಡ ಯಶಸ್ಸನ್ನು ಗಳಿಸಿದ ಸಿನಿಮಾ. ಆ ಚಿತ್ರದಲ್ಲಿ ಶ್ರುತಿ ನಿರ್ವಹಿಸಿದ ಪಾತ್ರ ಅವರ ವೃತ್ತಿಜೀವನದ ಅತ್ಯುತ್ತಮ ಪಾತ್ರಗಳಲ್ಲೊಂದು. 'ಮಾದ ಮತ್ತು ಮಾನಸಿ' ಚಿತ್ರದಲ್ಲಿ ಕೊಂಚ ಗ್ಲಾಮರಸ್ಸಾಗಿ ಕಾಣಿಸಿಕೊಳ್ಳುವ ಮೂಲಕ, ತಾವೇ ರೂಪಿಸಿಕೊಂಡ ಚೌಕಟ್ಟನ್ನು ಮುರಿಯುವ ಧೈರ್ಯ ಪ್ರದರ್ಶಿಸಿದ್ದಾರೆ.

ಹೊಸ ವರ್ಷ 2017 ಕೂಡ ಶ್ರುತಿ ಅವರಿಗೆ ಸ್ಮರಣೀಯವಾಗುವ ಸಾಧ್ಯತೆಯಿದೆ. 'ಬ್ಯೂಟಿಫುಲ್ ಮನಸುಗಳು' ಹಾಗೂ 'ಉರ್ವಿ' ತೆರೆಕಾಣಲು ಸಿದ್ಧತೆ ನಡೆಸುತ್ತಿವೆ. 'ಬ್ಯೂಟಿಫುಲ್ ಮನಸುಗಳು' ಜಯತೀರ್ಥ ನಿರ್ದೇಶನದ ಸಿನಿಮಾ. ಸದಭಿರುಚಿ ಹಾಗೂ ಪ್ರಯೋಗಶೀಲತೆಗೆ ಜಯತೀರ್ಥ ಹೆಸರಾದವರು. ಅವರ ಚಿತ್ರಗಳಲ್ಲಿ ನಾಯಕಿ ಪಾತ್ರಕ್ಕೆ ಮಹತ್ವವೂ ಹೆಚ್ಚು. ಇನ್ನು 'ಉರ್ವಿ' ಸಿನಿಮಾ ತನ್ನ ಟ್ರೈಲರ್ ಮೂಲಕವೇ ಸಹೃದಯರ ಗಮನಸೆಳೆದಿದೆ.

ಪ್ರದೀಪ್ ವರ್ಮ ನಿರ್ದೇಶನದ 'ಉರ್ವಿ' ಮೂವರು ಮಹಿಳೆಯರ ಬದುಕಿನ ಹೋರಾಟದ ಕಥನ. ಶ್ರುತಿ ಅವರೊಂದಿಗೆ ಶ್ರದ್ಧಾ ಶ್ರೀನಾಥ್ ಹಾಗೂ ಶ್ವೇತಾ ಪಂಡಿತ್ ಮುಖ್ಯ ಪಾತ್ರಗಳಲ್ಲಿ ನಟಿಸಿರುವ ಚಿತ್ರವಿದು. ಹೆಣ್ಣುಮಕ್ಕಳನ್ನು ವೇಶ್ಯಾವಾಟಿಕೆ ಜಾಲಕ್ಕೆ ದೂಡುವವರ ಕೈಗೆ ಸಿಕ್ಕಿ, ಅಲ್ಲಿಂದ ಪಾರಾಗಲು ಹೋರಾಡುವ ತರುಣಿಯ ಪಾತ್ರದಲ್ಲಿ ಶ್ರುತಿ ನಟಿಸಿದ್ದಾರೆ. 'ಈ ಚಿತ್ರದೊಂದಿಗೆ ಗುರ್ತಿಸಿಕೊಳ್ಳಲು ನನಗೆ ಹೆಮ್ಮೆಯೆನ್ನಿಸುತ್ತದೆ' ಎನ್ನುವ ಹೇಳಿಕೆಯೇ ಚಿತ್ರದ ಬಗ್ಗೆ ಅವರಿಗಿರುವ ನಿರೀಕ್ಷೆಯನ್ನು ಹೇಳುವಂತಿದೆ.

ಹೊಸ ನಿರ್ದೇಶಕರು, ಕಲಾವಿದರ ಸಿನಿಮಾಗಳಲ್ಲಿ ನಟಿಸಲು ಉತ್ಸಾಹ ತೋರಿಸುವ ಅವರು, ಇತ್ತೀಚೆಗೆ ತಾರಾವರ್ಚಸ್ಸಿನ ನಾಯಕರಿಗೆ ಜೋಡಿಯಾಗಿಯೂ ಕಾಣಿಸಿಕೊಳ್ಳುತ್ತಿದ್ದಾರೆ. ಉಪೇಂದ್ರ ನಾಯಕರಾಗಿರುವ 'ಉಪೇಂದ್ರ ಮತ್ತೆ ಬಾ' ಶ್ರುತಿ ಅಭಿನಯಿಸುತ್ತಿರುವ ಮತ್ತೊಂದು ಸಿನಿಮಾ. ಅದೊಂದು ಕೌಟುಂಬಿಕ ರಂಜನೆಯ ಚಿತ್ರವಂತೆ. ದರ್ಶನ್‌ರ ಹೊಸ ಸಿನಿಮಾದಲ್ಲೂ ಅವರಿಗೊಂದು ಪಾತ್ರವಿದೆ ಎನ್ನಲಾಗುತ್ತಿದೆ.

ತಾನು ನಟಿಸಿದ ಪಾತ್ರಗಳಾಚೆಗೂ ಯೋಚಿಸುವ ಶ್ರುತಿ, ನಿರ್ಮಾಣದ ಸಾಧ್ಯತೆಗಳ ಕುರಿತೂ ಯೋಚಿಸುತ್ತಿದ್ದಾರೆ. ಒಟ್ಟಿನಲ್ಲಿ, ಸೂಕ್ಷ್ಮ ಸಂವೇದನೆಯ ನಟಿಯಾಗಿ ಅವರು ರೂಪುಗೊಳ್ಳುತ್ತಿರುವುದು ಗಾಂಧಿನಗರದ ಸಂದರ್ಭದಲ್ಲಿ ಗಮನಾರ್ಹ ಸಂಗತಿ.

■ **ರಘು**